

ಬೊಗೊರಿಯಾ ಸರೋವರದಲ್ಲಿ ಫ್ಲೆಮಿಂಗೋಗಳು



ಬಿಸಿನೀರಿನ ಬುಗ್ಗೆಗಳು

ಮಳೆಗಾಲದಲ್ಲಿ ಹೋದರೆ ಸರೋವರದ ಸುತ್ತ ಸಮೃದ್ಧ ಹಸಿರು ಬಯಲನ್ನು ಕಾಣಬಹುದು.

ಈ ಸರೋವರದಲ್ಲಿ ಮೀನುಗಳಿಲ್ಲ. ಅತಿಯಾದ ಲವಣದಿಂದ ಇದು ಮೀನುಗಳ ವಾಸಕ್ಕೆ ಯೋಗ್ಯ ಲಕ್ಷಣಗಳನ್ನು ಉಳಿಸಿಕೊಂಡಿಲ್ಲ. ಈಜುವುದಕ್ಕೆ ಹೇಳಿ ಮಾಡಿಸಿದ ಸರೋವರ ಇದಲ್ಲ. ಸೂಕ್ತವಲ್ಲ. ನೀಲಿ, ಹಸಿರು ಪಾಚಿಗಳು ಹೆಚ್ಚಾಗಿ ಇರುವುದರಿಂದ ಅವುಗಳನ್ನು ತಿನ್ನಲು ವಿವಿಧೆಡೆಗಳಿಂದ ಫ್ಲೆಮಿಂಗೋಗಳು ಇಲ್ಲಿಗೆ ವಲಸೆ ಬರುತ್ತವೆ. ಕೆಲವೊಮ್ಮೆ ಸರೋವರದ ಫ್ಲೆಮಿಂಗೋಗಳ ಸಂಖ್ಯೆ ಹಲವು ಲಕ್ಷಗಳನ್ನು ದಾಟುತ್ತದೆ. ಗುಲಾಬಿ ಬಣ್ಣವದ ಫ್ಲೆಮಿಂಗೋಗಳ ಸಮೂಹನೋಟವನ್ನು ನೋಡುವುದು ಖಂಡಿತ ನಿಮ್ಮ ಬದುಕಿನ ಅತ್ಯದ್ಭುತ ಅನುಭವಗಳಲ್ಲಿ ಒಂದಾಗುತ್ತದೆ. ಫ್ಲೆಮಿಂಗೋಗಳ ಹೊರತಾಗಿ ಬಫಿಯೊ, ಝೀಬ್ರಾ, ಬಬೂನ್, ಹೈನಾ, ಇಂಪಾಲಾ ಮುಂತಾದ ಪ್ರಾಣಿಗಳೂ ಕಂಡುಬರುತ್ತವೆ.

ಅಲ್ಲಿಗೆ ಭೇಟಿ ನೀಡುವ ಪ್ರವಾಸಿಗರು ಹತ್ತಿರದ ಅಂಗಡಿಗಳಲ್ಲಿ ಹಸಿ ಮೊಟ್ಟೆಗಳನ್ನು ಕೊಂಡು ಬಿಸಿ ನೀರಿನ ಬುಗ್ಗೆಗಳಿಗೆ ಹೋಗಿ ಆ ಕುದಿಯುವ ನೀರಿನಲ್ಲಿ ಬೇಯಿಸಿ ತಿಂದು ಆನಂದಿಸುತ್ತಾರೆ. ಬೊಗೊರಿಯಾ ಸರೋವರದ ಸುತ್ತಮುತ್ತ ಸಾಕಷ್ಟು ವನ್ಯಜೀವಿಗಳಿವೆಯಾದರೂ ಬಿಸಿನೀರಿನ ಬುಗ್ಗೆಗಳ ಬಳಿಯಲ್ಲಿ ಫ್ಲೆಮಿಂಗೋಗಳನ್ನು ಹೊರತುಪಡಿಸಿ ಬೇರೆ ಯಾವ ಪ್ರಾಣಿಗಳೂ ಇರುವುದಿಲ್ಲ. ಬೊಗೊರಿಯಾ ಸರೋವರದ ಪಶ್ಚಿಮ ತೀರ ಬಿಸಿನೀರಿನ ಬುಗ್ಗೆಗಳಿಗೇ ಹೆಸರುವಾಸಿ. ಆ ಪ್ರದೇಶವು ಜ್ವಾಲಾಮುಖಿ ಬಂಡೆಗಳಿಂದ ಆವೃತವಾಗಿರುತ್ತದೆ.